

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯಿಂದ 18–10–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬದರಿ ಸಹಾಬರ ಬಗ್ಗೆ ಇಂದು ಸಹ ಪ್ರಸ್ತಾಪಿಸುವೆನು. ನಾನು ಈ ಮೊದಲು ಪ್ರಸ್ತಾಪಿಸಿದ ಹಝ್ರತ್ ಖುಬೈಬ್ ಬಿನ್ ಅದೀ(ರ)ಗೆ ಸಂಬಂಧಿಸಿ ಸ್ವಲ್ಪ ಹೆಚ್ಚಿಗೆ ವಿವರಣೆ ನೀಡಲಿದೆ. ಅವರು ಶಹೀದರಾಗುವಾಗ ಅಲ್ಲಾಹನನ್ನು ಸಂಬೋಧಿಸಿ ಪ್ರಾರ್ಥಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನನ್ನ ಸಲಾಮ್ ತಲಪಿಸು ಎಂದು. ಅಲ್ಲಾಹನು ಆ ಸಲಾಮ್ ಅವರಿಗೆ ತಲಪಿಸಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರೊಂದಿಗೆ ಕುಳಿತಿದ್ದಾಗ **ವ ಅಲೈಕುಮುಸ್ಸಲಾಮ್** ಎಂದು ಹೇಳಿದರು ಮತ್ತು ಸಹಾಬರೊಂದಿಗೆ ಆ ಶಹಾದತ್ ಬಗ್ಗೆ ಹೇಳಿದರು.

ಒಂದು ವರದಿ ಪ್ರಕಾರ ಹಝ್ರತ್ ಖುಬೈಬ್ ಬಿನ್ ಅದೀ ಸೆರೆ ಹಿಡಿಯಲ್ಪಟ್ಟ ಬಗ್ಗೆ ಹೀಗೆ ಸಹ ವಿವರಣೆ ಲಭಿಸುತ್ತದೆ: ಹುಜೈರ್ ಬಿನ್ ಅಬೂ ಅಯ್‌ಹಾಬ್‌ನ ಮನೆಯಲ್ಲಿ ಅವರನ್ನು ಬಂಧನದಲ್ಲಿ ಇರಿಸಲಾಗಿತ್ತು. ಅವನ ವಿಮೋಚಿತ ದಾಸಿ ಮುಆವಿಯ ಅನಂತರ ಮುಸ್ಲಿಮಳಾದಳು. ಆಕೆ ಹೀಗೆ ಹೇಳುತ್ತಿದ್ದಳು: ಅಲ್ಲಾಹನಾಣೆ ಹಝ್ರತ್ ಖುಬೈಬರಿಗಿಂತ ಉತ್ತಮರಾಗಿ ಬೇರೆ ಯಾರನ್ನೂ ನಾನು ಕಂಡಿಲ್ಲ. ಅವರು ಬಂಧಿಸಲ್ಪಟ್ಟ ಕೋಣೆಯ ಬಾಗಿಲಿನ ಸಂಧಿಯಿಂದ ನಾನು ಕಾಣುತ್ತಾ ಇದ್ದೆ, ಅವರು ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದರು. ದ್ರಾಕ್ಷೆ ಎಲ್ಲಿಯೂ ದೊರಕುವ ಕಾಲ ಅದಾಗಿರಲಿಲ್ಲ. ಆದರೆ ಹಝ್ರತ್ ಖುಬೈಬರ ಕೈಯಲ್ಲಿ ಒಬ್ಬ ಮನುಷ್ಯನ ತಲೆಯ ಗಾತ್ರದ ದ್ರಾಕ್ಷೆಯ ಗೊಂಚಲು ಇರುತ್ತಿತ್ತು. ಅದರಿಂದ ಅವರು ತಿನ್ನುತ್ತಿದ್ದರು. ಅದು ಅಲ್ಲಾಹನು ಒದಗಿಸಿದ ಆಹಾರವಾಗಿತ್ತು. ಅವರು ತಹಜ್ಜುದ್ ನಮಾಝ್‌ನಲ್ಲಿ ಪವಿತ್ರ ಖುರ್‌ಆನ್ ಉಚ್ಚ ಧ್ವನಿಯಿಂದ ಪಠಿಸುವಾಗ ಮಹಿಳೆಯರು ಅಳುತ್ತಿದ್ದರು ಮತ್ತು ಹಝ್ರತ್ ಖುಬೈಬ್ ಬಗ್ಗೆ ಅವರಿಗೆ ಅನುಕಂಪ ಸ್ಫುರಿಸುತ್ತಿತ್ತು. ಒಂದು ದಿನ ನಾನು ಹಝ್ರತ್ ಖುಬೈಬರೊಂದಿಗೆ ಕೇಳಿದೆ: ನಿಮಗೆ ಏನಾದರೂ ಆವಶ್ಯಕತೆ ಇದೆಯೇ? ಅವರು ಹೇಳಿದರು: ಇಲ್ಲ. ಒಂದು ದಿನ ಖುಬೈಬ್ ನನ್ನೊಂದಿಗೆ ಹೇಳಿದರು: ನನಗೆ ಒಂದು ಕ್ಷೌರದ ಕತ್ತಿ ಕಳುಹಿಸು. ನಾನು ನನ್ನ ಪುತ್ರ ಅಬೂ ಹುಸೈನ್ ಕೈಯಲ್ಲಿ ಕ್ಷೌರದ ಕತ್ತಿ ಕಳುಹಿಸಿದೆ. ಬಾಲಕ ಅವರ ಬಳಿಗೆ ಹೋದಾಗ ನಾನು ಯೋಚಿಸಿದೆ. ಕತ್ತಿ ತೆಗೆದು ಕೊಂಡುಹೋದ ನನ್ನ ಮಗನ ಮೇಲೆ ಪ್ರತೀಕಾರ ಮಾಡಬಹುದು. ನಾನು ಮಾಡಿದುದು ತಪ್ಪಾಯಿತು ಎಂದು ಭಾವಿಸಿದೆ. ಕ್ಷೌರದ ಕತ್ತಿ ಪಡೆದುಕೊಂಡು ಹಝ್ರತ್ ಖುಬೈಬ್ ಬಾಲಕನೊಂದಿಗೆ ತಮಾಷೆಗಾಗಿ ಹೇಳಿದರು: ನೀನು ಬಹಳ ಧೀರನಾಗಿರುವೆ. ನಾನು ವಿದ್ರೋಹ ಮಾಡಬಹುದೆಂಬ ಭಯ ಆಕೆಗೆ ಇಲ್ಲವೇ? ನೀವು ನನ್ನನ್ನು ಹತ್ಯೆ ಮಾಡುವ ಇರಾದೆ ಹೊಂದಿದ್ದೀರಿ. ಹಾಗಿದ್ದೂ ಆಕೆ ನಿನ್ನನ್ನು ನನ್ನ ಬಳಿಗೆ ಕಳುಹಿಸಿದಳು. ಹಝ್ರತ್ ಮುಆವಿಯ ಹೇಳುತ್ತಾಳೆ: ನಾನು ಖುಬೈಬರ ಈ ಮಾತುಗಳನ್ನು ಆಲಿಸುತ್ತಿದ್ದೆ. ನಾನು ಹೇಳಿದೆ: ನಾನು ಅಲ್ಲಾಹನ ರಕ್ಷಣೆ ಬಗ್ಗೆ ಭರವಸೆ ಹೊಂದಿ ನಿನ್ನ ಬಗ್ಗೆ ನಿರ್ಭಯಳಾಗಿ ನನ್ನ ಮಗನ ಕೈಯಲ್ಲಿ ಕತ್ತಿ ಕಳುಹಿಸಿರುವೆನು. ನಾನು ನನ್ನ ಮಗನನ್ನು ಕಳುಹಿಸಿರುವುದು ನೀನು ಆ ಕತ್ತಿ ಬಳಸಿ ನನ್ನ ಮಗನನ್ನು ಕೊಲ್ಲಲಿಕ್ಕಾಗಿ ಅಲ್ಲ. ಹಝ್ರತ್ ಖುಬೈಬ್ ಹೇಳಿದರು: ನಾನು ನಿನ್ನ ಮಗನನ್ನು ಹತ್ಯೆ ಮಾಡಲಾರೆ. ಯಾಕೆಂದರೆ ನಮ್ಮ ಧರ್ಮದಲ್ಲಿ ವಿಶ್ವಾಸಘಾತಕತೆ ಧರ್ಮಬದ್ಧವಲ್ಲ.

ದಾಸಿ ಪುನಃ ಹೇಳುತ್ತಾಳೆ: ನಾನು ಖುಬೈಬ್‌ನಿಗೆ ತಿಳಿಸಿದೆ, ನಿನ್ನನ್ನು ಇಲ್ಲಿಂದ ನಾಳೆ ಹೊರಗೆ ಕರೆದುಕೊಂಡು ಹೋಗಿ ವಧಿಸಲಿದ್ದಾರೆ ಎಂದು. ಮರುದಿನ ಹಝ್ರತ್ ಖುಬೈಬ್‌ರನ್ನು ಹಝ್ರತ್ ಝೈದ್ ಬಿನ್ ದಸ್‌ನರ ಜೊತೆಗೆ ಸಂಕೋಲೆಗಳಿಂದ ಬಂಧಿಸಿದ ಸ್ಥಿತಿಯಲ್ಲಿ ತನ್‌ಈಮ್ ಎಂಬಲ್ಲಿಗೆ ಕರೆದುಕೊಂಡು ಹೋಗಲಾಯಿತು. ಅದು ಮಕ್ಕದಿಂದ ಮದೀನದ ಕಡೆಗಿರುವ ದಾರಿಯಲ್ಲಿ ಮೂರು ಮೈಲು ದೂರದಲ್ಲಿರುವ ಸ್ಥಳವಾಗಿತ್ತು. ಅವರನ್ನು ಹತ್ಯೆ ಮಾಡುವುದನ್ನು ನೋಡಲು ಮಕ್ಕದ ಎಲ್ಲರೂ ಅಲ್ಲಿಗೆ ತಲಪಿದ್ದರು. ಮಕ್ಕದಲ್ಲಿ ಯಾರೂ ಬಾಕಿಯಾಗಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ವಧೆಯನ್ನು ವೀಕ್ಷಿಸಲು ಬಂದವರಲ್ಲಿ ಮಕ್ಕದ ಮುಖಂಡ ಅಬೂ ಸುಫ್‌ಯಾನ್ ಸಹ ಇದ್ದನು. ಅವನು ಝೈದ್‌ರನ್ನು ಸಂಬೋಧಿಸಿ ಹೇಳಿದನು: ನಿನ್ನ ಸ್ಥಾನದಲ್ಲಿ ಮುಹಮ್ಮದ್ ಇರಬೇಕಾಗಿತ್ತು ಎಂದೂ ನೀನು ನಿನ್ನ ಮನೆಯಲ್ಲಿ ಸೌಖ್ಯದಿಂದ ಇರುವಂತೆಯೂ ನೀನು ಆಶಿಸುವುದಿಲ್ಲವೇ? ಆಗ ಸಿಟ್ಟಿನಿಂದ ಝೈದ್ ಹೇಳಿದರು: ಅಲ್ಲಾಹನಾಣೆ, ಮದೀನದ ಗಲ್ಲಿಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಿಗೆ ಒಂದು ಮುಳ್ಳು ಚುಚ್ಚಿ ನೋವು ಅನುಭವಿಸುವುದಕ್ಕಿಂತ ನಾನು

ಮೃತನಾಗುವುದು ನನಗೆ ಇಷ್ಟಕರವಾಗಿದೆ ಎಂದು ಹೇಳಿದರು. ಇಂತಹ ಹೃತ್ಪೂರ್ವಕ ಪ್ರೀತಿ ಪ್ರಕಟಣೆಯಿಂದ ಅಬೂ ಸುಫ್‌ಯಾನ್ ಪ್ರಭಾವಿತನಾಗದೆ ಇರಲಿಲ್ಲ. ಅವನು ಆಶ್ಚರ್ಯದಿಂದ ಝೈದ್‌ರ ಕಡೆಗೆ ನೋಡಿ ತಕ್ಷಣ ಮೆಲ್ಲಗೆ ಹೇಳಿದನು: ಮುಹಮ್ಮದರನ್ನು ಅವರ ಸಂಗಡಿಗರು ಪ್ರೀತಿಸುವ ಹಾಗೆ ಬೇರೆ ಯಾರೂ ಇನ್ನೊಬ್ಬರನ್ನು ಪ್ರೀತಿಸಲಾರರು.

ನಾನು ವಿವರಿಸಲಿರುವ ಮುಂದಿನ ಸಹಾಬಿ ಹಝ್‌ರತ್ ಅಬ್ದುಲ್ಲಾ ಬಿನ್ ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್(ರ). ಅವರು ಅನ್‌ಸಾರ್‌ಗಳ ಖಝ್‌ರಜ್ ಗೋತ್ರದ ಬನೂ ಔಫ್ ಶಾಖೆಗೆ ಸೇರಿದವರಾಗಿದ್ದರು. ಕಪಟ ವಿಶ್ವಾಸಿಗಳ ನಾಯಕನಾದ ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್‌ನ ಮಗನಾಗಿದ್ದರು. ಅವರು ಅತ್ಯಂತ ವಿಧೇಯ ಮತ್ತು ಜೀವಾರ್ಪಣೆ ಮಾಡಲು ಸಿದ್ಧರಾದ ಸಹಾಬಿ ಆಗಿದ್ದರು. ಅಜ್ಞಾನ ಕಾಲದಲ್ಲಿ ಅವರ ಹೆಸರು ಖುಬಾಬ್ ಎಂದಾಗಿತ್ತು. ಅವರ ಹೆಸರನ್ನು ಅಬ್ದುಲ್ಲಾ ಎಂದು ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಬದಲಾಯಿಸಿದರು ಮತ್ತು ಹೇಳಿದರು: ಖುಬಾಬ್ ಎಂಬುದು ಶೈತಾನನ ಹೆಸರಾಗಿದೆ. ಹಝ್‌ರತ್ ಅಬ್ದುಲ್ಲಾ ಹಿರಿಯ ಸಹಾಬರಲ್ಲಿ ಒಬ್ಬರಾಗಿ ಗಣಿಸಲ್ಪಟ್ಟಿದ್ದರು. ಅವರು ಬದರ್, ಉಹುದ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರಿಗೆ ಓದಲು ಬರೆಯಲು ತಿಳಿದಿತ್ತು. ಹಝ್‌ರತ್ ಆಯಿಶ(ರ), ಹಝ್‌ರತ್ ಅಬ್ದುಲ್ಲಾರಿಂದ ಹದೀಸ್‌ಗಳನ್ನು ಸಹ ವರದಿ ಮಾಡಿದ್ದಾರೆ. ಹಝ್‌ರತ್ ಅಬ್ದುಲ್ಲಾ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವತೀರ್ಣವಾಗುತ್ತಿದ್ದ ಅಲ್ಲಾಹನ ವಚನಗಳ ಬರಹಗಾರರಲ್ಲಿಯೂ ಒಬ್ಬರಾಗಿದ್ದರು. ಒಂದು ವರದಿ ಪ್ರಕಾರ ಉಹುದ್ ಯುದ್ಧದಲ್ಲಿ ಹಝ್‌ರತ್ ಅಬ್ದುಲ್ಲಾರವರ ಎರಡು ಹಲ್ಲುಗಳು ಕಿತ್ತು ಹೋಗಿದ್ದುವು. ಅವುಗಳ ಸ್ಥಾನದಲ್ಲಿ ಬಂಗಾರದ ಹಲ್ಲುಗಳನ್ನಿರಿಸಲು ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞಾಪಿಸಿದ್ದರು.

ಉಹುದ್ ಯುದ್ಧದ ಸಂದರ್ಭದಲ್ಲಿ ಅಬೂ ಸುಫ್‌ಯಾನ್ ಮುಸ್ಲಿಮರಿಗೆ ಪಂಥಾಹ್ವಾನ ನೀಡಿದ್ದನು. ಮುಂದಿನ ವರ್ಷ ಬದರ್ ಮೈದಾನದಲ್ಲಿ ಭೇಟಿಯಾಗುವೆವು ಎಂದು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಪಂಥಾಹ್ವಾನವನ್ನು ಅಂಗೀಕರಿಸಿದ್ದರು. ಆದುದರಿಂದ ಮುಂದಿನ ವರ್ಷ ಶವ್ವಾಲ್ ತಿಂಗಳ ಕೊನೆಯ ಭಾಗದಲ್ಲಿ ಒಂದೂವರೆ ಸಾವಿರ ಸಹಾಬರ ಜೊತೆಗೆ ಬದರ್ ಕಡೆಗೆ ಹೊರಟರು. ಅಬೂ ಸುಫ್‌ಯಾನ್ ಎರಡು ಸಾವಿರ ಸೈನಿಕರೊಂದಿಗೆ ಮಕ್ಕದಿಂದ ಹೊರಟನು. ಆದರೆ ಅವನಿಗೆ ಭಯವಿತ್ತು. ಮುಸ್ಲಿಮರ ಎದುರಿಗೆ ಹೋಗಲು ಅವನು ಇಚ್ಛಿಸುತ್ತಿರಲಿಲ್ಲ. ಅವನು ಒಬ್ಬ ದೂತನನ್ನು ಮದೀನಕ್ಕೆ ಕಳುಹಿಸಿ ಮಕ್ಕದ ಖುರೈಶಿಗಳ ಯುದ್ಧ ಸಿದ್ಧತೆ ಬಗ್ಗೆ ಸುಳ್ಳು ಪ್ರಚಾರ ಮಾಡಿ ಮುಸ್ಲಿಮರಿಗೆ ಗಾಬರಿ ಹುಟ್ಟಿಸಲು ಪ್ರಯತ್ನಿಸಿದನು. ಕೆಲವು ಬಲಹೀನ ವಿಶ್ವಾಸಿಗಳು ಭಯಭೀತರಾದರು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರಿಗೆ ಧೈರ್ಯ ನೀಡುತ್ತಾ ಹೇಳಿದರು: ನಾನು ಒಬ್ಬಂಟಿಗನಾಗಿ ಹೋಗಬೇಕಾಗಿ ಬಂದರೂ ನಾನು ಹೋಗುವೆನು. ಆಗ ಮುಸ್ಲಿಮರು ಧೈರ್ಯದಿಂದ ಯುದ್ಧಕ್ಕೆ ಹೊರಟರು. ಹಾಗೆ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದೂವರೆ ಸಾವಿರ ಸಹಾಬರೊಂದಿಗೆ ಮದೀನದಿಂದ ಹೊರಟರು. ಅಬೂ ಸುಫ್‌ಯಾನ್ ತನ್ನ ಎರಡು ಸಾವಿರ ಸೈನಿಕರೊಂದಿಗೆ ಮಕ್ಕದಿಂದ ಹೊರಟನು. ಆದರೆ ಮುಸ್ಲಿಮರು ಬದರ್‌ಗೆ ತಲಪಿದರೂ ಖುರೈಶಿಗಳ ಸೈನ್ಯ ಮಕ್ಕದಿಂದ ಸ್ವಲ್ಪ ದೂರ ಸಾಗಿ ಅನಂತರ ಮಕ್ಕಕ್ಕೆ ಮರಳಿತು. ಇಸ್ಲಾಮೀ ಸೈನ್ಯ ಬದರ್‌ನಲ್ಲಿ ಎಂಟು ದಿನಗಳ ಕಾಲ ತಂಗಿದರೂ ಖುರೈಶಿಗಳ ಸೈನ್ಯ ಅಲ್ಲಿಗೆ ಬರಲಿಲ್ಲ. ಆದುದರಿಂದ ಮುಸ್ಲಿಮ್ ಸೈನ್ಯ ಮದೀನದ ಕಡೆಗೆ ಮರಳಿ ಹೋಯಿತು. ಈ ಯುದ್ಧ ಸಿದ್ಧತೆ ಬದರುಲ್ ಮೌಇದ್ ಎಂದು ಕರೆಯಲ್ಪಡುತ್ತದೆ.

ಹಝ್‌ರತ್ ಅಬ್ದುಲ್ಲಾ ಹಿಜರಿ ವರ್ಷ 12ರಲ್ಲಿ ಹಝ್‌ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಶಹೀದರಾದರು. ಹಝ್‌ರತ್ ಉಸಾಮ ಬಿನ್ ಝೈದ್ ವರದಿ ಮಾಡುತ್ತಾರೆ: ಒಮ್ಮೆ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಮೃಗದ ಮೇಲೇರಿ ಹೋಗುತ್ತಿದ್ದರು. ಅವರು ಒಂದು ಸ್ಥಳದಲ್ಲಿ ಕೆಲವು ಬಹುದೇವಾರಾಧಕರು, ಕೆಲವು ಯಹೂದಿಯರು ಮತ್ತು ಕೆಲವು ಮುಸ್ಲಿಮರು ಜೊತೆಗೂಡಿದ ಸಭೆಯ ಹತ್ತಿರ ದಾಟಿ ಹೋಗುವಾಗ ಧೂಳೆದ್ದಿತು. ಆ ಸಭೆಯಲ್ಲಿ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ಇದ್ದನು. ಆಗ ಅವನು ಇಸ್ಲಾಂ ಧರ್ಮ ಸ್ವೀಕರಿಸಿರಲಿಲ್ಲ. ಅಲ್ಲಿ ಹಝ್‌ರತ್ ಅಬ್ದುಲ್ಲಾ ಬಿನ್ ರವಾಹ ಸಹ ಇದ್ದರು. ಧೂಳು ಅಲ್ಲಿದ್ದವರನ್ನು ಆವರಿಸಿದಾಗ ಅಬ್ದುಲ್ಲಾ ಬಿನ್ ಉಬಯ್ಯ್ ತನ್ನ ಮೂಗನ್ನು ಚಾದರದಿಂದ ಮುಚ್ಚಿಕೊಂಡು ಹೇಳಿದರು: ನಮ್ಮ ಮೇಲೆ ಧೂಳು ಹಾರಿಸಬೇಡಿರಿ. ಆಗ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸವಾರಿ ಮೃಗದಿಂದ ಇಳಿದುಬಂದು ಜನರನ್ನು ಅಲ್ಲಾಹನ ಕಡೆಗೆ ಆಹ್ವಾನಿಸಿ ಪವಿತ್ರ ಖುರ್‌ಆನ್ ಓದಿ ಕೇಳಿಸಿದರು. ಆಗ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ಹೇಳಿದರು: ನೀವು ಹೇಳುವ ಮಾತಿಗಿಂತ ಉತ್ತಮವಾದುದು ಬೇರೊಂದಿಲ್ಲ. ಆದರೆ ನಾವು ಕುಳಿತಿರುವಲ್ಲಿಗೆ ಬಂದು ತೊಂದರೆ ನೀಡಬೇಡಿರಿ. ನೀವು ನಿಮ್ಮ ವಾಸಸ್ಥಳಕ್ಕೆ ಹೋಗಿರಿ. ನಿಮ್ಮ ಸಮೀಪಕ್ಕೆ ಬಂದವರಿಗೆ ಮಾತ್ರ ಉಪದೇಶಿಸಿರಿ. ಆಗ ಹಝ್‌ರತ್ ಅಬ್ದುಲ್ಲಾ ಬಿನ್ ರವಾಹ ಹೇಳಿದರು: ಅಲ್ಲಾಹನ ಸಂದೇಶವಾಹಕರೇ ನೀವು ನಮ್ಮ ಸಭೆಗಳಿಗೆ ಬಂದು ಉಪದೇಶಿಸಿರಿ ನಾವು ನಿಮ್ಮ ಮಾತುಗಳನ್ನು ಇಷ್ಟಪಡುತ್ತೇವೆ ಎಂದು ಹೇಳಿದರು. ಆಗ ಬಹುದೇವಾರಾಧಕರೂ, ಯಹೂದಿಯರೂ, ಮುಸ್ಲಿಮರೂ ಪರಸ್ಪರ ನಿಂದಿಸಲು ಪ್ರಾರಂಭಿಸಿದರು. ಅವರು ಪರಸ್ಪರ ಆಕ್ರಮಣ ಮಾಡುವ ಸಾಧ್ಯತೆಯಿತ್ತು. ಆದರೆ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಉಪದೇಶಿಸುತ್ತಾ ಅವರ ಆವೇಶ ತಗ್ಗಿಸುತ್ತಿದ್ದರು. ಅನಂತರ

ಅಲ್ಲಿ ಜಗಳ ನಿವಾರಣೆಯಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಸಹಾಬರು ಸಹನೆಯಿಂದ ವರ್ತಿಸುತ್ತಿದ್ದರು. ಬಹುದೇವಾರಾಧಕರು ಮತ್ತು ಯಹೂದಿಯರು ಕಷ್ಟ ನೀಡುವಾಗ ಸಹನೆ ದೋರುತ್ತಿದ್ದರು.

ಕೊನೆಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಬಹುದೇವಾರಾಧಕರ ವಿರುದ್ಧ ಯುದ್ಧ ಮಾಡಲು ಅನುಮತಿ ನೀಡಿದನು. ಬದರ್ ಎಂಬಲ್ಲಿ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಮಕ್ಕದ ಖುರೈಶಿಗಳ ದೊಡ್ಡ ದೊಡ್ಡ ಸಕ್ರಿಯ ನಾಯಕರು ಅಲ್ಲಾಹನ ಅನುಗ್ರಹದ ಮೂಲಕ ಕೊಲ್ಲಲ್ಪಟ್ಟರು. ಆಗ ಅಬ್ದುಲ್ಲಾ ಬಿನ್ ಸುಲೂಲ್ ಮತ್ತು ಅವರ ಜೊತೆಗಿದ್ದ ಬಹುದೇವಾರಾಧಕರು ಹೇಳಿದರು: ಈಗ ಈ ಜನರು ಜಯಶಾಲಿಗಳಾಗುತ್ತಿದ್ದಾರೆ. ಅವರು ಇಸ್ಲಾಮ್ ಧರ್ಮಕ್ಕೆ ಸೇರುವುದಾಗಿ ಬೈಅತ್ ಮಾಡಿದರು. ಎಂದರೆ ಬದರ್ ಯುದ್ಧದಲ್ಲಿ ಮುಸ್ಲಿಮರು ಜಯಗಳಿಸಿದಾಗ ಅವರು ಭಯಗೊಂಡು ಮುಸ್ಲಿಮರಾದರು.

ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರನ್ನು ಜಮಾಯಿಸಿ ಸಲಹೆ ಕೇಳಿದರು. ಮಕ್ಕದ ಸೈನ್ಯವನ್ನು ಎದುರಿಸಲು ಮದೀನದಲ್ಲಿಯೇ ನಿಂತು ಹೋರಾಡಬೇಕೇ ಅಥವಾ ಮದೀನದ ಹೊರಗೆ ಹೋಗಿ ಹೋರಾಡಬೇಕೇ ಎಂದು. ಆದರೆ ಸಲಹೆ ಕೇಳುವ ಮೊದಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾನು ಕಂಡ ಒಂದು ಸ್ವಪ್ನವನ್ನು ಹೀಗೆ ವಿವರಿಸಿದರು: ನಾನು ಕಳೆದ ರಾತ್ರಿ ಒಂದು ಸ್ವಪ್ನದಲ್ಲಿ ಒಂದು ಹಸುವನ್ನು ಕಂಡೆನು. ಆ ಹಸು ವಧಿಸಲ್ಪಡುವುದಾಗಿ ಕಂಡೆನು. ನನ್ನ ಖಡ್ಗದ ತುದಿಭಾಗ ಮುರಿದು ಹೋದುದಾಗಿ ಸಹ ಕಂಡೆನು. ನನ್ನ ಕೈಯನ್ನು ಒಂದು ಬಲಿಷ್ಠವಾದ ಕವಚದೊಳಗೆ ಹಾಕಿರುವುದಾಗಿ ಸಹ ಕಂಡೆನು. ನಾನು ಒಂದು ಟಗರಿನ ಮೇಲೆ ಸವಾರಿ ಮಾಡುವುದಾಗಿ ಸಹ ಕಂಡೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸ್ವಪ್ನವನ್ನು ಹೀಗೆ ವ್ಯಾಖ್ಯಾನಿಸಿದರು: ಹಸು ವಧಿಸಲ್ಪಡುವುದರ ಅರ್ಥ ಕೆಲವು ಸಹಾಬರು ಶಹೀದರಾಗುವರು ಎಂದಾಗಿದೆ. ನನ್ನ ಖಡ್ಗದ ತುದಿ ಮುರಿದು ಹೋದುದರ ಅರ್ಥ ನನ್ನ ನಿಕಟ ಸಂಬಂಧಿಕರಲ್ಲೊಬ್ಬ ಶಹೀದರಾಗುವರು ಎಂಬುದರ ಸೂಚನೆಯಾಗಿದೆ. ಅಥವಾ ಸ್ವತಃ ನನಗೆ ಏನಾದರೂ ಕಷ್ಟ ಸಂಭವಿಸಲೂಬಹುದು. ಕವಚದೊಳಗೆ ಕೈತೂರಿಸಿದುದರ ಅರ್ಥ ನಾವು ಮದೀನದೊಳಗಿದ್ದು ಹೋರಾಡುವುದು ಉತ್ತಮವೆಂದು. ಟಗರನ್ನು ಸವಾರಿ ಮಾಡಿದುದರ ಅರ್ಥ ಇನ್‌ಶಾಅಲ್ಲಾಹ್, ಬಹುದೇವಾರಾಧಕರ ಸೇನಾ ನಾಯಕ ಮುಸ್ಲಿಮರಿಂದ ಕೊಲ್ಲಲ್ಪಡುವನು ಎಂದಾಗಿದೆ.

ಅನಂತರ ಸಹಾಬರೊಂದಿಗೆ ಸಲಹೆ ಕೇಳಲಾಯಿತು. ಕೆಲವು ಹಿರಿಯ ಸಹಾಬರು ಮದೀನದೊಳಗೇ ಇದ್ದುಕೊಂಡು ಹೋರಾಡುವುದು ಹೆಚ್ಚು ಉತ್ತಮ ಎಂದು ಸಲಹೆ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಸಲಹೆ ಇಷ್ಟಕರವಾಯಿತು. ಅವರು ಹೇಳಿದರು: ನಾವು ಮದೀನದೊಳಗೆ ಇದ್ದುಕೊಂಡು ಹೋರಾಡುವುದು ಉತ್ತಮವಾಗಿದೆ. ಆದರೆ ಬಹುತೇಕ ಸಹಾಬರು ಮತ್ತು ಬದರ್ ಯುದ್ಧದಲ್ಲಿ ಭಾಗವಹಿಸಿರದ ಯುವಕರಾದ ಸಹಾಬರು ಒತ್ತಾಯಪೂರ್ವಕವಾಗಿ ಹೇಳಿದರು: ಮದೀನದ ಹೊರಗೆ ಮೈದಾನ ಪ್ರದೇಶದಲ್ಲಿ ಯುದ್ಧ ಮಾಡಬೇಕು ಎಂದು. ಅವರು ಆವೇಶಭರಿತರಾಗಿ ನೀಡಿದ ಸಲಹೆಯನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಂಗೀಕರಿಸಿದರು. ಅವರು ಹೇಳಿದರು: ನಾವು ಮದೀನದ ಹೊರಗೆ ಹೋಗಿ ಮೈದಾನು ಪ್ರದೇಶದಲ್ಲಿ ಬಹುದೇವಾರಾಧಕರನ್ನು ಎದುರಿಸುವೆವು ಎಂದು. ಅನಂತರ ಅವರು ಮನೆಯೊಳಗೆ ಹೋಗಿ ಶಿರವಸ್ತ್ರ ಧರಿಸಿದರು. ಆಯುಧ ತೆಗೆದುಕೊಂಡು ಅಲ್ಲಾಹನ ನಾಮ ಉಚ್ಚರಿಸಿ ಹೊರಗೆ ಬಂದರು. ಆದರೆ ಈ ಮಧ್ಯೆ ಔಸ್ ಗೋತ್ರದ ನಾಯಕ ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಇತರ ಹಿರಿಯ ಸಹಾಬರು ಯುವ ಸಹಾಬರೊಂದಿಗೆ ಮಾತನಾಡಿದಾಗ ಯುವ ಸಹಾಬರಿಗೆ ಮನವರಿಕೆಯಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಭಿಪ್ರಾಯಕ್ಕೆ ವಿರುದ್ಧವಾಗಿರುವ ತಮ್ಮ ಅಭಿಪ್ರಾಯಕ್ಕೆ ಒತ್ತು ನೀಡಬಾರದಿತ್ತು ಎಂದು. ಅವರೆಲ್ಲರೂ ಒಗ್ಗೂಡಿ ಹೇಳಿದರು: ಓ ಅಲ್ಲಾಹನ ರಸೂಲರೇ, ನಾವು ತಪ್ಪು ಮಾಡಿರುವೆವು. ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ನಮ್ಮ ಅಭಿಪ್ರಾಯದ ಬಗ್ಗೆ ಒತ್ತಾಯಿಸಿದೆವು. ತಾವು ಇಚ್ಛಿಸುವ ಹಾಗೆ ಯೋಗ್ಯವಾದ ರೀತಿಯಲ್ಲಿ ವರ್ತಿಸಿರಿ ಎಂದು ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆಯುಧ ಸನ್ನದ್ಧನಾದ ನಂತರ ಅದರ ಬಗ್ಗೆ ಅಲ್ಲಾಹನ ತೀರ್ಪು ದೊರಕುವ ಹೊರತು ಆಯುಧಗಳನ್ನು ಕೆಳಗಿರಿಸುವುದು ಅಲ್ಲಾಹನ ಪ್ರವಾದಿಗೆ ಶೋಭಾಯಮಾನವಾಗಿರುವುದಿಲ್ಲ. ಆದುದರಿಂದ ಈಗ ನೀವು ಅಲ್ಲಾಹನ ನಾಮ ಉಚ್ಚರಿಸಿ ಹೊರಡಿರಿ. ನೀವು ಸಹನೆಯಿಂದ ಕಾರ್ಯ ನಿರ್ವಹಿಸಿದರೆ ನೀವು ದೃಢವಾಗಿ ನಂಬಿರಿ ಅಲ್ಲಾಹನ ಸಹಾಯ ನಿಮ್ಮ ಜೊತೆಗಿರುವುದು.

ಮರುದಿನ ಎಂದರೆ ಹಿಜರಿ ವರ್ಷ 3 ಶವ್ವಾಲ್ ದಿನಾಂಕ 15ರಂದು ಸೆಹ್ರಿ ಸಮಯದಲ್ಲಿ ಇಸ್ಲಾಮೀ ಸೈನ್ಯ ಹೊರಟು ಬೆಳಗಾಗುತ್ತಲೇ ಉಹುದ್ ಪರ್ವತದ ಸಮೀಪಕ್ಕೆ ತಲಪಿತು. ಆಗ ಕಪಟ ವಿಶ್ವಾಸಿಗಳ ನಾಯಕ ಅಬ್ದುಲ್ಲಾ ಬಿನ್ ಸುಲೂಲ್ ವಿದ್ರೋಹ ಮಾಡಿ ತನ್ನ ಮುನ್ನೂರು ಸಂಗಡಿಗರೊಂದಿಗೆ ಮುಸ್ಲಿಮರ ಸೈನ್ಯದಿಂದ ಬೇರ್ಪಟ್ಟು ಮದೀನದ ಕಡೆಗೆ ಹಿಂದಿರುಗಿದರು. ಅವರು ಹೇಳಿದರು: ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನ ಮಾತು ಕೇಳಲಿಲ್ಲ. ಅನುಭವ ಹೀನರಾದ ಯುವಕರು ಹೇಳಿದ ಪ್ರಕಾರ ಮದೀನದ ಹೊರಗೆ ಬಂದಿರುವರು. ಆದುದರಿಂದ ನಾನು ಅವರ ಜೊತೆಗೆ ಸೇರಿ ಹೋರಾಡಲಾರೆ. ಆಗ ಮುಸ್ಲಿಮ್ ಸೈನಿಕರ ಸಂಖ್ಯೆ ಕೇವಲ ಏಳು ನೂರು ಆಗಿತ್ತು. ಬಹುದೇವಾರಾಧಕರ ಸೈನಿಕರ ಸಂಖ್ಯೆ ಮೂರು ಸಾವಿರವಾಗಿದ್ದು ಮುಸ್ಲಿಮರ ಸಂಖ್ಯೆ ಅದರ

ಕಾಲು ಭಾಗಕ್ಕಿಂತ ಕಡಿಮೆಯಾಗಿತ್ತು. ಅಂತೂ ಯುದ್ಧ ಪ್ರಾರಂಭವಾಯಿತು. ಇದರ ಬಗ್ಗೆ ಹೆಚ್ಚಿನ ವಿವರ ಮುಂದಿನ ವಾರದ ಖುತ್‌ಬದಲ್ಲಿ ನೀಡುವೆನು ಇನ್‌ಶಾಅಲ್ಲಾಹ್.

(ಖುತ್‌ಬದ ಕೊನೆಗೆ ಹುರ್ಝೂರರು ಮುಕರ್ರಮ್ ಖ್ವಾಜಾ ರಶೀದುದ್ದೀನ್ ಖಮರ್ ಸಾಹಿಬ್ (ಮೌಲಾನ ಖಮರುದ್ದೀನ್ ಸಾಹಿಬರ ಪುತ್ರ) ಅವರ ಸದ್ಗುಣಗಳನ್ನು ವಿವರಿಸಿದರು. ಅವರು ಅಕ್ಟೋಬರ್ ದಿನಾಂಕ 10ರಂದು ತನ್ನ 86ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದರು– **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**)

*****

اَلْحَمْدُ لِلّٰہِ نَحمَدُہٗ وَ نَسْتَعِیْنُہٗ وَ نَسْتَغْفِرُہٗ وَنُوْمِنُ بِہٖ وَ نَتَوَکَّلُ
عَلَیْہِ وَنَعُوْذُ بِاللّٰہِ مِنْ شُرُوْرِ اَنْفُسِنَا وَ مِنْ سَیِّئَاتِ اَعْمَالِنَا مَنْ
یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ فَلَا ھَادِیَ لَہٗ - وَنَشْھَدُ اَنْ لَّا
اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ- عِبَادَاللّٰہِ رَحِمَکُمُ
اللّٰہُ اِنَّ اللّٰہَ یَاْمُرُ بِالْعَدْلِ وَ الْاِحْسَانِ وَ اِیْتَاءِذِی الْقُرْبٰی وَ یَنْھٰی
عَنِ الْفَحْشَاءِ وَ الْمُنْکَرِ وَ الْبَغْیِ یَعِظُکُمْ لَعَلَّکُمْ تَذَکَّرُوْنَ
اُذْکُرُوْا اللّٰہَ یَذْکُرْکُمْ وَ ادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرْ-


***Friday Sermon delivered by Hadrath Khaleefatul Masih Al Khamis[(atba)]***

*At, Giessen, Germany. On 18-10-2019*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon